ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 25-01-1976.

# *ಡಬಲ್ ಲೈಟ್ ಸ್ವರೂಪರಾಗಿರಿ.*

(डबल लाइट स्वरूप बनो)

**ನಿರಂತರ ಯೋಗಿ ಸ್ಥಿತಿಯವರೆಗೂ ತಲುಪುವ ಮಾರ್ಗವನ್ನು ಹೇಳುವವರು, ಸದಾ ಡಬಲ್ ಲೈಟ್ ಸ್ವರೂಪವಾಗಿ ತಯಾರು ಮಾಡುವ ಶಿವ ತಂದೆ ಮಾತನಾಡುತ್ತಿದ್ದಾರೆ.**

ಭಕ್ತಿಮಾರ್ಗದಲ್ಲಿ ಲಕ್ಷ್ಮಿಯನ್ನು ಮಹಾದಾನಿ ಎಂದು ತೋರಿಸುತ್ತಾರೆ. ಮಹಾದಾನಿಯ ಚಿಹ್ನೆಯಾಗಿ ಏನನ್ನು ತೋರಿಸುತ್ತಾರೆ? (ಲಕ್ಷ್ಮಿಯು ಕೊಡುತ್ತಿರುವಂತೆ ತೋರಿಸಲಾಗಿದೆ) ಸಂಪತ್ತು ತುಂಬಿ ತುಳುಕಾಡುತ್ತಿರುತ್ತದೆ. ಇದು ಶಕ್ತಿಯರ ನೆನಪಾರ್ಥ(ಸ್ಮೃತಿಚಿಹ್ನೆ) ವಾಗಿದೆ. ಲಕ್ಷ್ಮಿ ಅರ್ಥಾತ್ ಸಂಪತ್ತಿನ ದೇವಿ, ಅದು ಸ್ಥೂಲವಾದ ಸಂಪತ್ತಾಗಿರುವುದಿಲ್ಲ. ಜ್ಞಾನದ ಸಂಪತ್ತು- ಶಕ್ತಿಗಳೆಂಬ ಸಂಪತ್ತಿನ ದೇವಿ ಅರ್ಥಾತ್ ಆ ಸಂಪತ್ತನ್ನು ಕೊಡುವವರಾಗಿದ್ದಾರೆ. ಅಂದಮೇಲೆ ಈ ಯಾವ ಚಿತ್ರವನ್ನು ಮಾಡಲಾಗಿದೆಯೋ ಅಂತಹ ಸಂಪತ್ತಿನ ದೇವಿಯಾಗಬೇಕಾಗಿದೆ. ಜ್ಞಾನವನ್ನು ಕೊಡಿ ಅಥವಾ ಶಕ್ತಿಗಳನ್ನೇ ಕೊಡಬಹುದು. ಇಂತಹ ಯಾವ ನೆನಪಾರ್ಥ ಚಿತ್ರವಿದೆ, ಆ ರೀತಿ ಚೈತನ್ಯದಲ್ಲಿ ತಮ್ಮನ್ನು ಅನುಭವ ಮಾಡುವಿರಾ? ಯಾರೇ ತಮ್ಮ ಮುಂದೆ ಒಂದು ಸೆಕೆಂಡಿಗಾಗಿ ಬಂದರೂ ಸಹ ತಮ್ಮ ದೃಷ್ಟಿಯಿಂದ - ನಾನು ಸ್ವಲ್ಪ ಪಡೆದೆನು ಎನ್ನುವಂತಹ ಅನುಭವ ಮಾಡಬೇಕು. ಆಗ ಕೊಡುವಂತಹ ದೇವಿ ಎಂದು ಹೇಳಲಾಗುತ್ತದೆ. ಈಗ ಈ ಸೇವೆಯಾಗಬೇಕು. ಆನಂತರ ವಿಶ್ವಕಲ್ಯಾಣವಾಗುತ್ತದೆ. ಇಷ್ಟೆಲ್ಲಾ ಆತ್ಮರಿಗೆ ಅವಶ್ಯವಾಗಿ ಕೊಡಬೇಕಾಗಿದೆ, ಅಂದಮೇಲೆ ಕೊಡುವುದರ ಸ್ವರೂಪ ಸೂಕ್ಷ್ಮ ಮತ್ತು ಅತಿ ಶಕ್ತಿಶಾಲಿ. ಕಡಿಮೆ ಸಮಯ ಮತ್ತು ಶ್ರೇಷ್ಠ ಪ್ರಾಪ್ತಿ ಈ ರೀತಿ ಕೊಡುವಂತಹ ಶಕ್ತಿಯರು ಅಥವಾ ದೇವಿಯರು ಎಷ್ಟುಜನ ತಯಾರಾಗಿದ್ದೀರಿ? ಇಂತಹ ದೇವಿಯರು ಎಷ್ಟು ಜನರಾಗುತ್ತಾರೆ? ಇದರನುಸಾರವಾಗಿ ನೆನಪಾರ್ಥದಲ್ಲಿಯೂ ನಂಬರ್ ಇದೆ. ಕೆಲವರು ಪ್ರತೀ ಸಮಯದಲ್ಲಿ ಕೊಡುವವರಾಗಿದ್ದಾರೆ. ಕೆಲವರು ಕೆಲವೊಮ್ಮೆ ಕೊಡುವವರು, ಕೆಲವರು ಕೆಲವರಿಗೇ ಕೊಡುವವರು, ಕೆಲವರು ಎಲ್ಲರಿಗೂ ಕೊಡುವವರು, ಕೆಲವರು ಹೇಳುತ್ತಾರೆ - ಅವಕಾಶ ಸಿಕ್ಕರೆ ಮಾಡುತ್ತೇವೆ, ಅವಕಾಶವಿರುತ್ತದೆ ಅಥವಾ ಸಹಯೋಗವು ಸಿಗುತ್ತದೆಯೆಂದರೆ ಮಾಡುತ್ತೇವೆ. ಅಂದಮೇಲೆ ಅವರ ನೆನಪಾರ್ಥವು ಏನಾಗಿರುತ್ತದೆ? ಅವರ ನೆನಪಾರ್ಥದಲ್ಲಿಯೂ ತಿಥಿ-ತಾರೀಖು ನೊಂದಣಿಯಾಗುತ್ತದೆ. ಯಾರು ಸದಾ ಮಾಡುವವರಾಗಿರುತ್ತಾರೆ, ಅವರ ಪೂಜೆಯೂ ಸದಾ ಆಗುತ್ತದೆ. ಯಾರು ಸಮಯ ಹಾಗೂ ಸಹಯೋಗದ ಆಧಾರದಿಂದ ಅವಕಾಶವನ್ನು ತೆಗೆದುಕೊಳ್ಳುತ್ತಾರೆ. ಅವರ ನೆನಪಾರ್ಥದ ದಿನಾಂಕವೂ ನೊಂದಣಿಯಾಗುತ್ತದೆ. ಕೆಲವು ದೇವಿಯರ ವಸ್ತ್ರಗಳನ್ನು ಬದಲಾಯಿಸುವ, ಪ್ರತಿಯೊಂದು ಕರ್ಮದ ಪೂಜೆಯಾಗುತ್ತದೆ, ಇದರಿಂದ ಸಿದ್ಧವಾಗುತ್ತದೆ ಅವರು ಪ್ರತಿಯೊಂದು ಕರ್ಮವನ್ನು ಮಾಡುತ್ತಾ, ಪೂರ್ಣ ಸಮಯದಲ್ಲಿ ದಾನ ಮಾಡಿದರು. ಅವರಿಗೆ ಮಹಾದಾನಿ ಎಂದು ಹೇಳಲಾಗುತ್ತದೆ ಆದ್ದರಿಂದ ಅವರ ಮಹಾನ್ ಪೂಜೆಯು ಮಹಾನ್ ನೆನಪಾರ್ಥವಾಗಿರುತ್ತದೆ. ಕೆಲವರು ಸದಾ ಜೊತೆಗಾರರ ಜೊತೆಯಲ್ಲಿ ಸ್ನೇಹವನ್ನು ನಿಭಾಯಿಸುತ್ತಾ ನಡೆಯುತ್ತಾರೆ. ಇನ್ನೂ ಕೆಲವರು ಜೊತೆಯಿದ್ದರೂ ಸ್ನೇಹದ ಜೊತೆಯನ್ನು ನಿಭಾಯಿಸುವುದಿಲ್ಲ. ಅವರ ನೆನಪಾರ್ಥದಲ್ಲಿಯೂ ಪೂರ್ಣ ಸಮಯದಲ್ಲಿ ಪೂಜಾರಿಗಳ ಜೊತೆ ಸಿಗುವುದಿಲ್ಲ. ಯಾರು ಇಲ್ಲಿ (ಸಂಗಮದಲ್ಲಿ) ಸ್ವಾರ್ಥಕ್ಕಾಗಿ ಬರುತ್ತಾರೆಯೋ ನೆನಪಾರ್ಥದಲ್ಲಿಯೂ ಇವರು ಯಾವುದರ ನೆನಪಾರ್ಥವೆಂದು ಸ್ಪಷ್ಟವಾಗುತ್ತದೆ. ಇದೂ ಸಹ ರಹಸ್ಯವಾಗಿದೆ. ಈಗ ಇಂತಹವರಾಗಬೇಕು. ಸದಾ ಜೊತೆಗಾರರ ಜೊತೆ ಸ್ನೇಹದ ಜೊತೆಯನ್ನು ನಿಭಾಯಿಸಬೇಕಾಗಿದೆ. ಕೇವಲ ಸಮಯಪ್ರಮಾಣ ನಿಭಾಯಿಸುವುದಲ್ಲ. ಸದಾ ಕಾಲಕ್ಕಾಗಿ ಜೊತೆಯನ್ನು ನಿಭಾಯಿಸಬೇಕಾಗಿದೆ. ಸ್ವಾರ್ಥದಿಂದ ಆಗಬಾರದು, ಕೆಲಸ ಆಗುವುದಕ್ಕಾಗಿ ಆಗಬಾರದು ಆದರೆ ಸ್ನೇಹದಿಂದ ಮತ್ತು ಸದಾ ಕಾಲಕ್ಕಾಗಿ ಜೊತೆಯನ್ನು ನಿಭಾಯಿಸಬೇಕಾಗಿದೆ. ಒಳ್ಳೆಯದು-

**ವ್ಯಕ್ತಿಗತ ವಾರ್ತಾಲಾಪ.**

ಸದಾ ತಮ್ಮನ್ನು ಬಾಪ್‌ದಾದಾರವರ ಜೊತೆಯ ಅನುಭವ ಮಾಡುತ್ತೀರಾ ಅಥವಾ ಒಂಟಿಯೆಂದು ಅನುಭವ ಮಾಡುತ್ತೀರಾ? ಹೇಗೆ ತಂದೆಯನ್ನು ಸಾವಿರ ಭುಜಧಾರಿಯೆಂದು ತೋರಿಸಲಾಗುತ್ತದೆ, ಸರ್ವ ಶಕ್ತಿವಂತನಾಗಿದ್ದರೂ ಮಕ್ಕಳ ಜೊತೆಯ ನೆನಪಾರ್ಥವಾಗಿ ಭುಜಗಳ ರೂಪದಲ್ಲಿ ತೋರಿಸುತ್ತಾರೆ, ಹಾಗೆಯೇ ನೀವು ಮಕ್ಕಳು ಸಹ ತಮ್ಮನ್ನು ಸದಾ ಸರ್ವಶಕ್ತಿವಂತ ತಂದೆಯ ಜೊತೆಯ ಅನುಭವ ಮಾಡುತ್ತೀರಾ ಅಥವಾ ಕೆಲವೊಮ್ಮೆ ಅನುಭವ ಮಾಡುತ್ತೀರಾ? ಯಾರು ಸದಾ ಜೊತೆಯ ಅನುಭವ ಮಾಡುತ್ತೀರೋ ಅವರು ಎಂದೂ ಯಾವುದೇ ದೇಹಧಾರಿಯ ಜೊತೆಯ ಅವಶ್ಯಕತೆಯಿದೆಯೆಂದು ಅನುಭವ ಮಾಡುವುದಿಲ್ಲ. ಕೆಲವೊಮ್ಮೆ ಕೆಲವು ಸೇವೆಗಳಲ್ಲಿಯೂ ದೇಹಧಾರಿಯ ಆಧಾರವನ್ನು ತೆಗೆದುಕೊಳ್ಳುವುದಿಲ್ಲ. ಮರ್ಯಾದೆಯ ಪ್ರಮಾಣದಂತೆ, ಸಂಘಟನೆಯನುಸಾರ ಸಹಯೋಗವನ್ನು ತೆಗೆದುಕೊಳ್ಳುವುದು ಬೇರೆ ಮಾತಾಗಿದೆ. ಉಳಿದಂತೆ ಯಾವುದೇ ಪರಿಸ್ಥಿತಿಯಲ್ಲಿ- ಇವರು ನನ್ನನ್ನು ಪರಿಸ್ಥಿತಿಯಿಂದ ಪಾರು ಮಾಡುತ್ತಾರೆ, ಸಲಹೆಯನ್ನು ಕೊಡುತ್ತಾರೆ ಅಥವಾ ಆಶ್ರಯವನ್ನು ಕೊಡುತ್ತಾರೆ ಎಂದು ದೇಹಧಾರಿಯ ನೆನಪು ಬಂದಿತೆಂದರೆ ಇದರಿಂದ ಸಿದ್ಧವಾಗುತ್ತದೆ ಸರ್ವ ಶಕ್ತಿವಂತನ ಆಶ್ರಯವು ಸದಾ ಜೊತೆಯಿರುವುದಿಲ್ಲ. ಸದಾ ಜೊತೆಯಿರುವವರು ತಂದೆಯ ಸಮೀಪದ ಸಂಬಂಧವಿರುವ ಕಾರಣದಿಂದ ಸಂಕಲ್ಪದಲ್ಲಿ, ವಾರ್ತಾಲಾಪದಲ್ಲಿಯೂ ಸಹ – ಇದನ್ನು ಬಾಬಾರವರಿಂದ ಕೇಳೋಣವೆಂದು ತಂದೆಯ ನೆನಪು ಬರುತ್ತದೆ. ನಿಮಿತ್ತ ಶಿಕ್ಷಕಿಯವರು ನೆನಪಿಗೆ ಬರಬಹುದು, ಜೊತೆಗಾರರು ನೆನಪಿಗೆ ಬರಬಹುದು ಅಥವಾ ತಮ್ಮ ಸಮಾನರು ನೆನಪಿಗೆ ಬರಬಹುದು - ಇದೂ ಸಹ ಅವರವರ ಕಾರ್ಯದನುಸಾರವಾಗಿ ಆಗುತ್ತದೆ. ಆದರೆ ಸದಾ ಮನಸ್ಸಿನಲ್ಲಿ, ಬುದ್ಧಿಯಲ್ಲಿ ಬಾಬಾ ಇರಲಿ, ಬಾಬಾರವರ ನೆನಪು ಬರಬೇಕು. ಯಾವಾಗ ಡೈರೆಕ್ಟ್ ಜೊತೆಯನ್ನು ನಿಭಾಯಿಸುತ್ತೇನೆಂಬ ವಾಯಿದೆ(ಪ್ರತಿಜ್ಞೆ)ಯಿದೆ ಅಂದಮೇಲೆ ವಾಯಿದೆಯನುಸಾರ ಫಾಯ್‌ದಾ(ಲಾಭ)ವನ್ನು ತೆಗೆದುಕೊಳ್ಳಬೇಕು. ಈ ಸಮಯದಲ್ಲಿ ಇಬ್ಬರು ತಂದೆಯರ ಜೊತೆ ವ್ಯಕ್ತಿಗತವಾದ ಅನುಭವ ವಾಗುತ್ತದೆ. ನಂತರ ಇಡೀ ಕಲ್ಪದಲ್ಲಾಗುವುದಿಲ್ಲ. ಯಾವ ಪ್ರಾಪ್ತಿಯು ಈಗಷ್ಟೇ ಆಗುತ್ತದೆ, ಮತ್ತೆ ಆಗುವುದಿಲ್ಲವೆಂದರೆ ಸಂಪೂರ್ಣವಾದ ಲಾಭವನ್ನು ತೆಗೆದುಕೊಳ್ಳಬೇಕು. ಯಾವುದೇ ಮಾತಿರಬಹುದು, ಸದಾ ತಂದೆಯದೇ ನೆನಪಿರಲಿ - ಇಂತಹವರಿಗೆ ನಿರಂತರ ಯೋಗಿಗಳೆಂದು ಹೇಳಲಾಗುತ್ತದೆ. ಪ್ರತೀ ಹೆಜ್ಜೆಯಲ್ಲಿ ತಂದೆಯ ನೆನಪಿರುತ್ತದೆಯೆಂದರೆ ಇದೂ ಸಹ ಯೋಗವಾಯಿತು. ಇಂತಹ ನಿರಂತರ ಯೋಗಿಗಳಾಗಿದ್ದೀರಾ ಅಥವಾ ಅಗಬೇಕಾಗಿದೆಯೇ? ಯಾವಾಗ ತಂದೆಯು ಸ್ವಯಂ ಜೊತೆ ಕೊಡುತ್ತೇನೆಂಬ ಅವಕಾಶವನ್ನು ಕೊಡುತ್ತಿದ್ದಾರೆ. ಆ ಅವಕಾಶವನ್ನು ಸ್ವೀಕಾರ ಮಾಡಬೇಕಲ್ಲವೇ? ಯಾವಾಗ ಅರ್ಧಕಲ್ಪದ ಭಕ್ತಿಮಾರ್ಗದಲ್ಲಿ ಜೊತೆಕೊಡುತ್ತೇವೆಂದು ತಂದೆಯಲ್ಲಿ ಹರಕೆ ಮಾಡಿಕೊಂಡೆವು - ಈಗಂತು ಸ್ವಯಂ ತಂದೆಯೇ ಅವಕಾಶ ಕೊಡುತ್ತಿದ್ದಾರೆಂದರೆ ಆ ಅವಕಾಶವನ್ನು ಸ್ವೀಕಾರ ಮಾಡಬೇಕಾಗಿದೆ. ಹೇಗೆ ಸ್ಥೂಲದಲ್ಲಿ ಯಾವುದೇ ವಸ್ತುವನ್ನು ಯಾರು ಯಾರಿಗೇ ಆಫರ್ ಮಾಡಿದಾಗ ಅದನ್ನು ಸ್ವೀಕರಿಸಲಿಲ್ಲವೆಂದರೆ ಇದಕ್ಕೆ ಸಭ್ಯತೆಯೆಂದು ತಿಳಿಯುವುದಿಲ್ಲ. ಇದಕ್ಕೆ ಗೌರವವೆಂದು ಹೇಳಲಾಗುತ್ತದೆಯೇ? ಅದರಂತೆಯೇ, ಗಾಡ್ ಪರಮಾತ್ಮನ ಆಫರ್ ಆಗಿದೆ. ಸದಾ ತಂದೆಯ ಜೊತೆ ಎಂದರೆ ನಿರಂತರ ಯೋಗಿಯಾಗಿರುವುದಾಗಿದೆ. ಯಾವಾಗ ತಂದೆಯು ಹೊರೆಯನ್ನು ತೆಗೆದುಕೊಳ್ಳಲು ಆಫರ್ ಕೊಡುತ್ತಿದ್ದಾರೆಂದರೆ ನೀವೇಕೆ ಹೊರೆಯನ್ನು ಸ್ವೀಕರಿಸುತ್ತೀರಿ? ಹೊರೆಯಿರುವವರು ತೀವ್ರತೆಯಿಂದ ನಡೆಯಲು ಸಾಧ್ಯವಾಗುವುದಿಲ್ಲ. ಅಂದಮೇಲೆ ಈಗ ಈ ಅನೇಕ ಪ್ರಕಾರದ ಹೊರೆ ಗಳಿಂದ ಹಗುರರಾಗಿ ಬಿಡಬೇಕು, ತಮ್ಮ ಮೂಲೆ-ಮೂಲೆಯಲ್ಲಿಯೂ (ಪ್ರತಿಯೊಂದು ಕಡೆಯಿಂದ) ಸ್ವಚ್ಛಗೊಳಿಸಬೇಕು, ಆಂತರ್ಯದಲ್ಲಿಯೇ ಆ ಕೊಳಕನ್ನು ಸಂಭಾಲನೆ ಮಾಡಿಟ್ಟುಕೊಳ್ಳಬಾರದು. ಅವಕಾಶ ಸಿಕ್ಕಾಗ ಕೊಡುತ್ತೇನೆಂದು ಹೇಳಬಾರದು. ಇರುವುದಂತು ಕೊಳಕಲ್ಲವೆ, ಕೊಳಕಿನಿಂದ ಕೀಟಾಣುಗಳ ಉತ್ಪತ್ತಿಯಾಗುತ್ತದೆ, ಅದನ್ನು ಇಟ್ಟುಕೊಳ್ಳುವುದು ಎಂದರೆ ಅದರ ವೃದ್ಧಿಯನ್ನು ಮಾಡುವುದಾಗಿದೆ. ಅಂದಮೇಲೆ ಯಾವಾಗ ಕೊಳಕಿನಿಂದ ಖಾಲಿಯಾಗಿರುತ್ತೀರೋ ಆಗಲೇ ತಂದೆಯ ಮೂಲಕ ಸಿಕ್ಕಿರುವಂತಹ ಖಜಾನೆಯನ್ನು ತಮ್ಮಲ್ಲಿ ತುಂಬಿಕೊಳ್ಳಲು ಸಾಧ್ಯವಾಗುತ್ತದೆ. ಒಳ್ಳೆಯದು- ಓಂಶಾಂತಿ!

ಅವ್ಯಕ್ತ ಮುರಳಿ 25-01-1976.

***ಡಬಲ್ ಲೈಟ್ ಸ್ವರೂಪರಾಗಿರಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಜ್ಞಾನ ಮತ್ತು ಶಕ್ತಿಯನ್ನು ದಾನ ಮಾಡುವ ಚೈತನ್ಯ ಲಕ್ಷ್ಮಿ ದೇವಿ.

2. ನನ್ನ ಎದುರಿಗೆ ಯಾರು ಬಂದಾಗಲು ಒಂದು ಕ್ಷಣಕ್ಕಾದರೂ ನನ್ನ ದೃಷ್ಟಿಯಿಂದ " ಇವರಿಂದ ನಾನು ಸ್ವಲ್ಪ ಪಡೆದೆನು" ಎಂಬ ಅನುಭವ ಮಾಡಿಕೊಂಡರು.

3. ನಾನು ಪ್ರತೀಕರ್ಮ ಮಾಡುತ್ತಲೂ ನಿರಂತರ ದಾನ ಮಾಡುವ ಮಹಾದಾನಿಯಾಗಿ ಸದಾ ಪೂಜೆಯನ್ನು ಪಡೆದಿದ್ದೇನೆ.

4. ನಾನು ಎಲ್ಲರ ಪ್ರತಿ ಸ್ನೇಹವನ್ನು, ಜೊತೆಯನ್ನು ಸದಾ ಕಾಲಕ್ಕಾಗಿ ನಿಭಾಯಿಸಿದ್ದೇನೆ.